ಶ್ರೀ ಡಿ.ಬಿ.ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಶಿವಣ್ಣನವರು ಹೇಳಿದ ಹಾಗೆ ಇದು ಒಂದು ಬಹಳ ಪ್ರಿಸ್ಟೀಜಿಯಸ್ ಪ್ರಾಜೆಕ್ಟ್ ಆಗಿರುತ್ತದೆ. ಇದರಲ್ಲಿ ಸಾಲದ ಪೋರ್ಷನ್ ಎಷ್ಟು, ಮತ್ತು ಒಟ್ಟಾರೆ ತೆಗೆದುಕೊಂಡಿರತಕ್ಕಂಥ ಸಾಲ ಎಷ್ಟು, ಇವೆಲ್ಲಾ ಸಾಕಷ್ಟು ವಿವರಗಳನ್ನು ನಾನು ಒದಗಿಸಿದ್ದೇನೆ. ಅವರಿಗೆ ಒಂದೆರಡು ಶಂಕೆಗಳು ಇವೆ. ಏನೆಂದರೆ, 10 ಕಾಮಗಾರಿಗಳನ್ನು ತೆಗೆದುಕೊಂಡಿದ್ದಾರೆ, ಇನ್ನೂ ಐದು ಕಾಮಗಾರಿಗಳನ್ನು ತೆಗೆದುಕೊಂಡಿಲ್ಲ ಎನ್ನುವುದು ಒಂದು ಪ್ರಶ್ನೆ. ಈ ಕಾಮಗಾರಿಗಳ ವಿವರ ಅವರಿಗೆ ಬೇಕೆಂದಾದರೆ ನಾನು ಅವರಿಗೆ ಕೊಡುತ್ತೇನೆ. ಈ ಹತ್ತರಲ್ಲಿ ಬಹಳ ಮುಖ್ಯವಾಗಿರತಕ್ಕಂಥ ಕಾಮಗಾರಿಗಳು ಯಾವುವು ಎಂಬುದನ್ನು ನನ್ನ ಉತ್ತರದಲ್ಲಿ ನಾನು ನಿಖರವಾಗಿ ಮತ್ತು ವಿವರವಾಗಿ ತಿಳಿಸುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಕೆಲವು ಅವ್ಯವಹಾರಗಳು ಆಗಿವೆ ಎಂಬ ಶಂಕೆಯನ್ನು ಏನು ಮಾನ್ಯ ಸದಸ್ಯರು ವ್ಯಕ್ತಮಾಡಿದರು, ಇದರ ಬಗ್ಗೆ ಆಗಲೇ ಲೋಕಾಯುಕ್ತದವರು ವೆರಿಫೈ ಮಾಡುತ್ತಿದ್ದಾರೆ. ಅವರ ವರದಿ ಬಂದ ಕೂಡಲೇ ಅದರಲ್ಲಿ ಏನಾದರೂ ದೋಷಗಳು ಆಗಿದ್ದರೆ ಶಂಕೆಯ ನಿವಾರಣೆಗೆ ನಾನು ಸೂಕ್ತವಾದಂಥ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ತಪ್ಪು ಮಾಡಿರತಕ್ಕಂಥ ಕಂಟ್ರಾಕ್ಟರ್ಸ್, ಏನು ಇದ್ದಾರೆ ಅವರ ಕಂಟ್ರಾಕ್ಟ್‌ನ್ನು ಕ್ಯಾನ್ಸಲ್ ಮಾಡಬೇಕೆನ್ನುವುದು ಅವರ ಎರಡನೇ ಪ್ರಶ್ನೆಯಾಗಿದೆ. ನಾವು ಈ ಕಾಂಟ್ರಾಕ್ಟ್ ಕೊಡುವುದಕ್ಕೆ ಮುಂಚೆ ಇರತಕ್ಕಂಥ ನಿಯಮಗಳ ಪ್ರಕಾರ ಅವರಿಗೆ ಏನು ಫೆನಾಲ್ಟಿ ವಿಧಿಸುವುದಕ್ಕೆ ಅವಕಾಶವಿದೆ ಅದನ್ನು ವಿಧಿಸಿದ್ದೇವೆ ಮತ್ತು ಎಷ್ಟು ಮೊತ್ತವನ್ನು ವಿಧಿಸಿದ್ದೇವೆ ಎನ್ನುವುದನ್ನೂ ಇದರಲ್ಲಿ ವಿವರವಾಗಿ ಕೊಟ್ಟಿದ್ದೇನೆ. ಆದ್ದರಿಂದ ಅವರಿಗೆ ಸಮಾಧಾನ ಆಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಸಮಾಧಾನ ಆಗದೇ ಇದ್ದರೆ ಇನ್ನೇನಾದರೂ ಪ್ರಶ್ನೆಗಳನ್ನು ಕೇಳಿದರೆ ಉತ್ತರವನ್ನು ಕೊಡುವುದಕ್ಕೆ ತಯಾರಿದ್ದೇನೆ.

ಶ್ರೀ ಎಸ್. ಶಿವಣ್ಣ : ಮಾನ್ಯ ಅಧ್ಯಕ್ಷರೆ, ಉತ್ತರ ಕೊಟ್ಟಿರುವ ಬಗ್ಗೆ ಮಾನ್ಯ ಮಂತ್ರಿಗಳಲ್ಲಿ ಚಕಾರ ಎತ್ತುವುದಕ್ಕೆ ಹೋಗುವುದಿಲ್ಲ. ಆ ಕಂಟ್ರಾಕ್ಟ್‌ದಾರರಿಗೆ ದಂಡ ಹಾಕಿದರೆ ಸಾಲದು. ಏಕೆಂದರೆ 66.31 ಕೋಟಿ ರೂಪಾಯಿಗಳನ್ನು ನಾವು ಸಾಲ ತೆಗೆದುಕೊಂಡಿರುವಂಥದ್ದು ಮತ್ತು ಆ ಸಾಲವನ್ನು ತೀರಿಸುವುದಕ್ಕೆ 25 ವರ್ಷ ಕಾಲಾವಕಾಶ ಇರುವಂಥದ್ದು. 25 ವರ್ಷದಲ್ಲಿ 10 ವರ್ಷದ ಸಾಲವನ್ನು ಅವರು ಆಗಲೇ ತೆಗೆದುಕೊಂಡು ಮುಗಿಸಿಕೊಂಡುಬಿಟ್ಟಿರುತ್ತಾರೆ. ನಾವು ಜನಗಳ ಮೇಲೆ ಹೇಗೆ ಹೊರೆ ಹೊರೆಸುವುದು? ಅದಕ್ಕೋಸ್ಕರ ಆ ಕಂಟ್ರಾಕ್ಟರಿಗೆ ಬರೀ ದಂಡ ವಿಧಿಸುವುದಲ್ಲದೆ, ಬ್ಲಾಕ್‌ಲಿಸ್ಟ್ ಮಾಡುವುದರ ಜೊತೆಗೆ ಕ್ರಿಮಿನಲ್ ಕೇಸ್ ಹಾಕಬೇಕೆಂದು ಹೇಳಬಯಸುತ್ತೇನೆ.

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಅಧ್ಯಕ್ಷರೆ, ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಆಗತ್ಯಬಿದ್ದರೆ ಆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಹಗರಿ ಬೊಮ್ಮನ ಹಳ್ಳಿ ತಾಲ್ಲೂಕಿನಲ್ಲಿ ಸಾರಿಗೆ ತರಬೇತಿ ಕೇಂದ್ರ ಪ್ರಾರಂಭಿಸುವ ಬಗ್ಗೆ.

250(2430) ಶ್ರೀ ಸಿರಾಜ್ ಶೇಖ್ (ಕೊಡ್ಲಿಗಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಮಾಳವಿ ಗ್ರಾಮದಲ್ಲಿ ಸಾರಿಗೆ

ಇಲಾಖೆಯ ವತಿಯಿಂದ ತರಬೇತಿ ಕೇಂದ್ರವನ್ನು ಪ್ರಾರಂಭ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೆ;

ಆ. ಇದ್ದಲ್ಲಿ, ತರಬೇತಿ ಕೇಂದ್ರವನ್ನು ಎಂದಿನಿಂದ ಪ್ರಾರಂಭಿಸಲಾಗುವುದು; ಅದರ ಯೋಜನಾ ವೆಚ್ಚವೆಷ್ಟು;

ಇ. ಸಾರಿಗೆ ಇಲಾಖೆಗೆ ಸಂಬಂಧಪಟ್ಟಂತೆ ಎಷ್ಟು ಎಕರೆ ಭೂಮಿ ಮಾಳವಿ ಗ್ರಾಮದಲ್ಲಿ ಇದೆ?

ಶ್ರೀ ರಮಾನಾಥ ರೈ ಬಿ. (ಸಾರಿಗೆ ಸಚಿವರು)

ಅ. ಹೌದು.

ಆ. ಯೋಜನಾವೆಚ್ಚ ರೂ.551.35 ಲಕ್ಷಗಳು. ಕೇಂದ್ರ ಸರ್ಕಾರದಿಂದ ನೆರವು ದೊರೆತ ತಕ್ಷಣ ಕಾಮಗಾರಿ ಪ್ರಾರಂಭಿಸಲಾಗುವುದು.

ಇ. 64 ಎಕರೆಯನ್ನು ಹೊಂದಲಾಗಿದೆ.

ಶ್ರೀ ಸಿರಾಜ್ ಶೇಖ್: ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಕೇಂದ್ರ ಸರ್ಕಾರದಿಂದ ನೆರವು ದೊರೆತ ತಕ್ಷಣ ಕಾಮಗಾರಿ ಪ್ರಾರಂಭಿಸಲಾಗುವುದು ಎಂದು ಹೇಳಿದ್ದಾರೆ. ಈ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಯಾವಾಗ ಕಳುಹಿಸಿದ್ದಾರೆ? ಈ 551.35 ಲಕ್ಷ ರೂಪಾಯಿಗಳಲ್ಲಿ ರಾಜ್ಯಸರ್ಕಾರದ ಪಾಲು ಏನಾದರು ಇದೆಯೇ? ಇದು ಪ್ರಾರಂಭವಾದಲ್ಲಿ ಎಷ್ಟು ಜನ ಅಭ್ಯರ್ಥಿಗಳಿಗೆ ತರಬೇತಿಯನ್ನು ಕೊಡಲಾಗುವುದು ಎಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳಬಯಸುತ್ತೇನೆ.

ಶ್ರೀ ರಮಾನಾಥ ರೈ: ಮಾನ್ಯ ಅಧ್ಯಕ್ಷರೆ, ಈಶಾನ್ಯ ಕರ್ನಾಟಕ ಸಾರಿಗೆ ಸಂಸ್ಥೆಯ ಭಾಗಕ್ಕೆ ಬರತಕ್ಕಂಥ ಬಳ್ಳಾರಿ ವಿಭಾಗದಲ್ಲಿ ಹಗರಿಬೊಮ್ಮನಹಳ್ಳಿ ತಾಲ್ಲೂಕಿನಲ್ಲಿ ಈಗಾಗಲೇ 64 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡು ಈ ಚಾಲಕರಿಗೆ, ಸಿಬ್ಬಂದಿಗೆ ತರಬೇತಿಯನ್ನು ಕೊಡುವುದಕ್ಕೆ ತರಬೇತಿ ಶಾಲೆಯನ್ನು ತೆರೆಯುವುದಕ್ಕೆ ಉದ್ದೇಶವನ್ನು ಇಟ್ಟುಕೊಂಡು ಮಾಡುವಂಥದ್ದು. ಇದು ಕೇಂದ್ರ ಸರ್ಕಾರದ ನೆರವಿನ ಕಾರ್ಯಕ್ರಮವಾಗಿದ್ದು ಅವರು ಶೇಕಡ 70 ಭಾಗ ಈ ಯೋಜನೆಗೆ ಹಣವನ್ನು ಕೊಡುತ್ತಾರೆ, 30 ಭಾಗ ಕಾರ್ಪೊರೇಷನ್ ಭರಿಸಬೇಕಾಗುತ್ತದೆ, ಈಗಾಗಲೇ ಇದರ ಮೊದಲ ಹಂತದ ಕಾರ್ಯಕ್ಕೆ 3 ಕೋಟಿ 85 ಲಕ್ಷ ಹಣದಲ್ಲಿ ಶೇಕಡ 70 ಭಾಗ ಅಂದರೆ ಸುಮಾರು 2 ಕೋಟಿ 69 ಲಕ್ಷ ಹಣವನ್ನು ಬಿಡುಗಡೆ ಮಾಡುವಂತೆ ನಾವು ಕೇಂದ್ರ ಸರ್ಕಾರವನ್ನು ಕೋರಿದ್ದೇವೆ, ಅವರು ಬಿಡುಗಡೆ ಮಾಡುತ್ತೇವೆ ಎನ್ನುವ ಭರವಸೆ ಕೊಟ್ಟಿದ್ದಾರೆ, ಆದಷ್ಟು ಶೀಘ್ರದಲ್ಲಿ ಅದು ಬಿಡುಗಡೆಯಾದ ತಕ್ಷಣ ಈ ಕಾಮಗಾರಿಯನ್ನು ನಾವು ಪ್ರಾರಂಭಿಸುತ್ತೇವೆ.

ಶ್ರೀ ಸಿರಾಜ್ ಶೇಖ್: ಸುಮಾರು 8-10 ವರ್ಷಗಳ ಹಿಂದೆ ಅಲ್ಲಿ ತರಬೇತಿ ಕೇಂದ್ರ ಇತ್ತು, ಅದನ್ನು ಕಾರಣಾಂತರಗಳಿಂದ ಮುಚ್ಚಲಾಗಿದೆ, ಅಲ್ಲಿ ಸುಮಾರು 64 ಎಕರೆ ಸಾರಿಗೆ ಇಲಾಖೆಗೆ ಸೇರಿದ ಭೂಮಿ ಇದೆ ಹೀಗಾಗಿ ಅದನ್ನು ತಕ್ಷಣ ಪ್ರಾರಂಭಿಸದಿದ್ದರೆ ಆ ಭೂಮಿಯನ್ನು ಒತ್ತುವರಿ ಮಾಡುವ ಸಂದರ್ಭ ಜಾಸ್ತಿ ಇದೆ. ಏಕೆಂದರೆ, ಅಲ್ಲಿ ಸುತ್ತಮುತ್ತ ನೀರಾವರಿ ಭೂಮಿ ಇರುವುದರಿಂದ ರೈತರು ಆ ಭೂಮಿಯನ್ನು ಒತ್ತುವರಿ ಮಾಡಿದರೆ ಸಾರಿಗೆ ಇಲಾಖೆಗೆ ಸಂಬಂಧಪಟ್ಟ ಆ ಭೂಮಿ ಒತ್ತುವರಿಯಾದರೆ ಮುಂದೆ ಈ ತರಬೇತಿ ಕೇಂದ್ರ ಪ್ರಾರಂಭ ಮಾಡುವುದು ಬಹಳ ಕಷ್ಟವಾಗುತ್ತದೆ. ಆದ್ದರಿಂದ, ಈ ತರಬೇತಿ ಕೇಂದ್ರವನ್ನು ಪ್ರಾರಂಭಿಸಿದರೆ ಆ ಭಾಗದಲ್ಲಿರುವ

ಗ್ರಾಮೀಣ ಯುವಕರಿಗೆ ಅನುಕೂಲವಾಗುತ್ತದೆ ಸಾಧ್ಯವಾದಷ್ಟು ಬೇಗ ಅದನ್ನು ಪ್ರಾರಂಭಿಸಬೇಕೆಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಅಲ್ಲಂ ವೀರಭದ್ರಪ್ಪ: ಈ ದಿವಸ ನಾವು ಹೊಸದಾಗಿ ರಿಕ್ರೂಟ್ ಮಡಿ ಡ್ರೈವರ್ಸ್ ಅಂಡ್ ಕಂಡಕ್ಟರ್ಸ್‌ಗಳನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ, ಈ ತರಬೇತಿ ಕೇಂದ್ರ ಇದೊಂದು ರೀತಿಯ ರೆಸಿಡೆನ್ಸಿಯಲ್ ಸ್ಕೂಲ್ ಇದ್ದ ಹಾಗೆ ಆಗುತ್ತದೆ, ಏಕೆಂದರೆ ಅವರಿಗೆ ಟ್ರೈನಿಂಗ್ ಕೊಡುವುದು, ಮುಖ್ಯವಾಗಿರುವುದರಿಂದ, ಈಗಾಗಲೇ ಕೇಂದ್ರ ಸರ್ಕಾರ ಅನುಮತಿ ಕೊಡುತ್ತದೆ ಎನ್ನುವ ಉದ್ದೇಶದ ಹಿನ್ನೆಲೆಯಲ್ಲಿ ಸರ್ಕಾರ ಅದನ್ನು ಪ್ರಾರಂಭ ಮಾಡಿ ಬಿಟ್ಟರೆ ಚೆನ್ನಾಗಿರುತ್ತದೆ, ಸರ್ಕಾರದ ಭಾಗ ಏನಿದೆ ಒನ್‌ಥರ್ಡ್ ಭಾಗ ಅದರಿಂದ ಕೂಡಲೇ ಅದನ್ನು ಪ್ರಾರಂಭ ಮಾಡಿದರೆ ಆ ಭಾಗದಲ್ಲಿರುವ ಬ್ಯಾಕ್‌ವರ್ಡ್ ಏರಿಯಾಕ್ಕೆ ಅನುಕೂಲವಾಗುತ್ತದೆ ಎಂದು ಮಾನ್ಯ ಮಂತ್ರಿಗಳಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇವೆ.

ಶ್ರೀ ಬಿ. ರಮಾನಾಥ ರೈ: ಸನ್ಮಾನ್ಯ ಗೌರವಾನ್ವಿತ ಸದಸ್ಯರ ಕಳಕಳಿಯನ್ನು ನಾನು ಅರ್ಥ ಮಾಡಿಕೊಂಡಿದ್ದು, ಈ ಕಾಮಗಾರಿಯನ್ನು ಪ್ರಾರಂಭ ಮಾಡಲಿಕ್ಕೆ ಆದಷ್ಟು ಜಾಗ್ರತೆ ಸರ್ವ ಪ್ರಯತ್ನವನ್ನು ಮಾಡುತ್ತೇವೆ.

ಮಂಗಳೂರು ವಿಧಾನ ಸಭಾ ಕ್ಷೇತ್ರದಲ್ಲಿನ ಪೋಲಿಸ್ ವಸತಿಗೃಹಗಳಿಗೆ ಮೂಲಭೂತ ಸೌಲಭ್ಯ ಒದಗಿಸುವುದು

251 (2471) ಶ್ರೀ ಯೋಗೇಶ್ ಭಟ್ (ಮಂಗಳೂರು) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಮಂಗಳೂರು ವಿಧಾನ ಸಭಾ ಕ್ಷೇತ್ರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊರತೆಯಿರುವ ಪೊಲೀಸ್ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಯಾವ ಯಾವ ವಿಭಾಗದಲ್ಲಿ ಎಷ್ಟು ಭರ್ತಿ ಮಾಡಬೇಕಾಗಿದೆ; ಯಾವಾಗ ಭರ್ತಿ ಮಾಡಲಾಗುವುದು;

ಆ. ಪೊಲೀಸ್ ಸಿಬ್ಬಂದಿಗಳಲ್ಲಿ ಸರ್ಕಾರಿ ವಸತಿ ಸೌಲಭ್ಯವನ್ನು ಪಡೆಯಲು ಅರ್ಹರಾದವರ ಸಂಖ್ಯೆ ಎಷ್ಟು; ಎಷ್ಟು ಮಂದಿಗೆ ಲಭ್ಯವಾಗಿದೆ; ಉಳಿದವರಿಗೆ ಯಾವಾಗ ಒದಗಿಸಲಾಗುವುದು;

ಇ. ಉರ್ವಾ ಹಾಗು ಕದ್ರಿ ಸ್ಟೇಶನ್ನುಗಳಿಗೆ ಹೊಸ ಕಟ್ಟಡ ಕಟ್ಟಲು ಅನುದಾನ ಯಾವಾಗ ಬಿಡುಗಡೆ ಮಾಡಲಾಗುವುದು.

ಈ. ಪೊಲೀಸ್ ವಸತಿ ಗೃಹದಲ್ಲಿ ಮೂಲಭೂತ ಸೌಲಭ್ಯ ಒದಗಿಸಲು ಕೈಗೊಂಡ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

ಅ. ಮಂಗಳೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 9 ಪೊಲೀಸ್ ಸಿಬ್ಬಂದಿಗಳ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 47 ಪೊಲೀಸ್ ಸಿಬ್ಬಂದಿಗಳ ಕೊರತೆ ಇರುತ್ತದೆ. (ವಿವರಗಳು ಕೆಳಕಂಡಂತಿರುತ್ತವೆ)

ಹುದ್ದೆಗಳು	ಮಂಗಳೂರು ವಿಧಾನ ಸಭಾ ಕ್ಷೇತ್ರ	ದಕ್ಷಿಣ ಕನ್ನಡ ಜಿಲ್ಲೆ
1. ಆರ್.ಪಿ.ಐ	-	1